ರಾಜ್ಯಕ್ಕೆ ಕೇಂದ್ರ ಸರ್ಕಾರದ ನೆರವು

2289 - ಶ್ರೀ ರಾಜೂಗೌಡ (ಹನೂರು) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರದಿಂದ ರಾಜ್ಯಕ್ಕೆ 90-91ರಿಂದ ಇದುವರೆವಿಗೆ ನೀಡಲಾಗಿರುವ ನೆರವು ಎಷ್ಟು?

ಆ) ರಾಜ್ಯಕ್ಕೆ ನೀಡಲಾಗಿರುವ ಒಟ್ಟು ಯೋಜನಾ ಮುಂಗಡ ಎಷ್ಟು?

ಇ) ಯಾವುದೇ ಒಂದು ರಾಜ್ಯ ನಿರಂತರವಾಗಿ 4 ವರ್ಷಗಳ ಕಾಲ ಬರಗಾಲದಿಂದ ತೊಂದರೆ ಅನುಭವಿಸಿದರೆ, ಯೋಜನಾ ಮುಂಗಡವನ್ನು ಅನುದಾನವಾಗಿ ಪರಿಗಣಿಸಲು ಕೇಂದ್ರ ಸರ್ಕಾರ ಒಪ್ಪುವುದೇ?

ಈ) ಬರಗಾಲ ಪೀಡಿತ ರಾಜ್ಯಗಳಲ್ಲಿನ ಪರಿಹಾರ ಕಾಮಗಾರಿ ವೆಚ್ಚವನ್ನು ಪೂರ್ತಿಯಾಗಿ ಕೇಂದ್ರ ಸರ್ಕಾರ ಭರಿಸಲು ಹಣಕಾಸು ಆಯೋಗ ಶಿಫಾರಸ್ಸನ್ನೇನಾದರೂ ಮಾಡಿದೆಯೇ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

ಅ) ಕೇಂದ್ರ ಸರ್ಕಾರದವರು ರಾಜ್ಯಕ್ಕೆ 90-91 ರಿಂದ ಇದುವರೆವಿಗೂ 30-6-91ರ ವರೆಗೆ) ನೀಡಲಾಗಿರುವ ನೆರವು 440.00 ಕೋಟಿ ರೂಪಾಯಿಗಳು.

ಆ) ಕೇಂದ್ರ ಸರ್ಕಾರದವರು ರಾಜ್ಯಕ್ಕೆ 1990-91ನೇ ಸಾಲಿನಿಂದ ಯೋಜನಾ ಮುಂಗಡ ನೀಡಿರುವುದಿಲ್ಲ.

ಇ) ಉಪ ಪ್ರಶ್ನೆ (ಅ) ದಲ್ಲಿ ನೀಡಿರುವ ಉತ್ತರದಿಂದ ಇದು ಅನ್ವಯವಾಗುವುದಿಲ್ಲ.

ಈ) ಒಂಭತ್ತನೆ ವಿತ್ತ ಆಯೋಗದವರು ಕ್ಷಾಮ ಪರಿಹಾರಕ್ಕಾಗಿ "ಪ್ರಕೃತಿ ವಿಕೋಪ ನಿಧಿ" ಯನ್ನು ಸೃಷ್ಟಿಸಬೇಕೆಂದು ಶಿಫಾರಸ್ಸು ಮಾಡಿರುವರು. ಕರ್ನಾಟಕ ರಾಜ್ಯಕ್ಕೆ ಈ ನಿಧಿಯ ಮೂಲದ್ರವ್ಯವು 27.00 ಕೋಟಿ ರೂಪಾಯಿಗಳಾಗಿರುತ್ತದೆ. ಈ ನಿಧಿಗೆ 3 :1 ಪ್ರಮಾಣದಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಣ ಒದಗಿಸುವರು.

ಶ್ರೀ ಜಿ. ರಾಜುಗೌಡ : ಸ್ವಾಮಿ , 1986-87, 1987-88,1988-89 ಮತ್ತು 1989-90 ರಲ್ಲಿ ರಾಜ್ಯದ ಯೋಜನಾ ಮುಂಗಡ ಎಷ್ಟು ಹಣ ಪಡೆದಿದೆ? ನಾಲ್ಕು ವರ್ಷಗಳ ಕಾಲ ಬರ ಪರಿಸ್ಥಿತಿಯಲ್ಲಿದ್ದ ರಾಜ್ಯಕ್ಕೆ ಇರತಕ್ಕಂಥ ಯೋಜನಾ ಮುಂಗಡವನ್ನು ಅನುದಾನವಾಗಿ ಪರಿಗಣಿಸಬೇಕೆಂದು ಹೇಳಿ ಎಂಟನೇ ಹಣಕಾಸು ಆಯೋಗ ವರದಿಯ 70ನೇ ಪುಟದ 11ರಿಂದ 14ರವರೆಗಿನ ಪ್ಯಾರಾದಲ್ಲಿ ಯೋಜನಾ ಆಯೋಗಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ? ಇದರಿಂದ ರಾಜ್ಯಕ್ಕೆ ಎಷ್ಟು ಲಾಭವಾಗಿದೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಕೇಂದ್ರದಿಂದ ರಾಜ್ಯಕ್ಕೆ 1990-91ರಿಂದ ಇದುವರೆಗೆ ನೆರವು ಪಡೆದಿರುವುದು ಎಷ್ಟು ಎಂದು ಅವರು ಕೇಳಿರುವುದರಿಂದ ಅಷ್ಟಕ್ಕೆ ಮಾತ್ರ ಉತ್ತರ ಕೊಟ್ಟಿದ್ದೇನೆ. The Hon'ble Member wants to know the details of the previous financial year like 1986-87, 1987-88, 1988-89, ಅದು ಬೇಕೆಂದು ತಾವು ಪ್ರತ್ಯೇಕವಾಗಿ ಕೇಳಿದರೆ ನಾನು ಉತ್ತರ ಒದಗಿಸಿಕೊಡುತ್ತೇನೆ. ಈಗ ಅದು ನನ್ನ ಹತ್ತಿರ ಇಲ್ಲ. ಆ ದೃಷ್ಟಿಯಿಂದ ಹೇಳಿದ್ದೇನೆ. ಆನಂತರ, ಉಳಿದಿರತಕ್ಕಂಥ ವಿಚಾರ ಏನಿದೆ, ಫೈನಾನ್ಸ್ ಕಮೀಷನರ್ ವಿಚಾರ, ಈ ಕ್ಯಲಾಮಿಟಿ ರಿಲೀಫ್ ಫಂಡ್ ಫಾರ್ ಡ್ರಾಟ್ ರಿಲೀಫ್ ಏನಿದೆ, ಅದನ್ನು ಮಾಡಿದರು. ಅದರಲ್ಲಿ 3:4 ಭಾಗ ಸೆಂಟ್ರಲ್ ಗೌರ್ನ್‌ಮೆಂಟ್ ಫಂಡ್ ಉಳಿದ 1:4 ಭಾಗ ಸ್ಟೇಟ್ ಗೌರ್ನ್‌ಮೆಂಟ್ ಭರಿಸಬೇಕೆಂದು ಅದನ್ನು ಮಾಡಿದ್ದಾರೆ. ಆನಂತರ, ಇದಕ್ಕೆ ನಾವು ಕೊಟ್ಟಿರತಕ್ಕಂಥಾದ್ದು, the fund for our State is concerned with each year. 27 ಕೋಟಿ ರೂಪಾಯಿಗಳು ಇದನ್ನು ಕೂಡ ಇದರಲ್ಲಿ ಹೇಳಿದ್ದೇವೆ. ನಾವು ಹೇಳಿದ

ಹಾಗೆ, 20 ಕೋಟಿ 25 ಲಕ್ಷ ರೂಪಾಯಿಗಳು ಗೌರ್ನ್‌ಮೆಂಟ್ ಆಫ್ ಇಂಡಿಯಾದು, ಉಳಿದಿರತಕ್ಕಂಥಾದ್ದು ನಮ್ಮ ರಾಜ್ಯಕ್ಕೆ ಬರುತ್ತದೆ. ಅನಂತರ ನಾವು ಪದೇ ಪದೇ ಹೇಳಿದ್ದೇವೆ. ನಮ್ಮಲ್ಲಿರತಕ್ಕಂಥ ಪ್ಲಾನ್ ಫಂಡ್ ಏನಿದೆ, ನೀವು ಅದನ್ನು ಮುಟ್ಟಕೂಡದು, ನಮ್ಮ ಪ್ಲಾನ್ ಫಂಡ್ ಉಳಿಯಬೇಕೆಂಬುದು ನಮ್ಮ ವಾದ. ಏಕೆಂದರೆ, ಇವರು ಕನ್ವರ್ಟ್ ಮಾಡುತ್ತಾರ ಹೋಗುವುದು, ಮತ್ತೊಂದು ಮಾಡುವುದು, ಅದರಿಂದ ನಮಗೆ ಕಟ್ ಆಗುತ್ತದೆ. ಅದನ್ನು ಮಾಡಕೂಡದು ಎಂಬ ಮಾತನ್ನು ನಾವು ಪದೇ ಪದೇ ಕೇಂದ್ರ ಸರ್ಕಾರಕ್ಕೆ ಹೇಳಿದ್ದೇವೆ.

ಶ್ರೀ ಜಿ. ರಾಜುಗೌಡ : ಅಧ್ಯಕ್ಷರೇ ಈ ಕ್ಯಲಾಮಿಟಿ ರಿಲೀಫ್ ಫಂಡ್ ಎನ್ನುವುದು ಯಾವಾಗ ಸೃಷ್ಟಿಯಾಯಿತು? ಈವರೆಗೆ ಅದಕ್ಕೆ ಎಷ್ಟು ಹಣ ಹೂಡಿದ್ದೀರಿ, ಇದರಲ್ಲಿ ರಾಜ್ಯದ ಪಾಲು ಎಷ್ಟು? ಕೇಂದ್ರದ ಪಾಲು ಎಷ್ಟು? ತಾವು ಈವರೆಗೆ ಆ ನಿಧಿಯಿಂದ ಎಷ್ಟು ಹಣವನ್ನು ಪಡೆದಿದ್ದೀರಿ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ನಾನು ಈಗಾಗಲೇ ತಿಳಿಸಿದ್ದೇನೆ. ಶ್ರೀಮಾನ್ ವಿ.ಪಿ. ಸಿಂಗ್‌ರವರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಈ ಕ್ಯಲಾಮಿಟಿ ರಿಲೀಫ್ ಫಂಡ್ ಅನ್ನು ಕ್ರಿಯೇಟ್ ಮಾಡಿದ್ದಾರೆ. ಇದೊಂದು ಹೊಸ ಸೂತ್ರ. 3:4 ಭಾಗ ಹಣ ಎಂದರೆ ಎಷ್ಟಾಗುತ್ತದೆ ಎಂಬ ಲೇಟೆಸ್ಟ್ ವಿವರಗಳನ್ನು ಕಂದಾಯ ಸಚಿವರಿಂದ ಪಡೆಯಬೇಕಾಗುತ್ತದೆ. ಅವರಿಂದ ಪಡೆದುಕೊಡುತ್ತೇನೆ. 1990-91ಕ್ಕೆ ಸಂಬಂಧಪಟ್ಟಂತೆ ಮಾತ್ರ ನಾನು ಈಗ ಕೊಟ್ಟಿದ್ದೇನೆ. 20 ಕೋಟಿ 25 ಲಕ್ಷ ರೂಪಾಯಿಗಳು ಅವರದು, ಉಳಿದಿರತಕ್ಕಂಥ 6 ಕೋಟಿ 75 ಲಕ್ಷ ರೂಪಾಯಿಗಳು ನಮ್ಮ ಷೇರಿನ ಹಣ. ಅದನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುತ್ತದೆ.

ರಾಜ್ಯದಲ್ಲಿ ಪೂಜಾ ಸ್ಥಳಗಳ ನೆಲಸಮ ಹಾಗೂ ನಾಶ

2112 - ಶ್ರೀ ಎ.ಎಂ. ಹಿಂದುಸಗೇರಿ (ಹುಬ್ಬಳ್ಳಿ) : ಮಾನ್ಯ ಗೃಹ ಮತ್ತು ಅಬ್ಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ಟೋಬರ್, ನವೆಂಬರ್ ಮತ್ತು ನಂತರದ ದಿನಗಳಲ್ಲಿ ಕೋಮು ಗಲಭೆಗಳಲ್ಲಿ ರಾಜ್ಯದಲ್ಲಿ ಜಖಿಂ ಆದ, ಹಾಳುಗೆಡವಿದ ಹಾಗೂ ನಾಶಪಡಿಸಿದ ಪೂಜಾ ಸ್ಥಳಗಳ ಸಂಖ್ಯೆ ಎಷ್ಟು? ಇದಗಾಗಳು, ರುದ್ರ ಭೂಮಿ, ಶಾಲೆಗಳು (ಮದರಾಸುಗಳು), ಮಸೀದಿಗಳು ಮತ್ತು ಹಿಂದೂ ದೇವಾಲಯಗಳ ಜಿಲ್ಲಾವಾರು ಸಂಖ್ಯೆ ಎಷ್ಟು?

ಆ) ಈ ಮೇಲಿನವುಗಳಲ್ಲಿ ಎಷ್ಟು ಪೂಜಾ ಸ್ಥಳಗಳನ್ನು ಜೀರ್ಣೋದ್ಧಾರ ಮಾಡಲಾಗಿದೆ. ದುರಸ್ತಿ ಮಾಡಲಾಗಿದೆ ಅಥವಾ ಪುನರ್ ನಿರ್ಮಾಣ ಮಾಡಲಾಗಿದೆ ಮತ್ತು ಇನ್ನೂ ಎಷ್ಟು ಪೂಜಾ ಸ್ಥಳಗಳು ದುರಸ್ತಿ ಆಗಬೇಕಾಗಿವೆ (ಜಿಲ್ಲಾವಾರು ಅಂಕಿಗಳನ್ನು ಕೊಡಿ)

ಇ) ರಾಜ್ಯದಲ್ಲಿ ಹಾನಿಗೊಳಗಾದ ಪೂಜಾ ಸ್ಥಳಗಳ ಜೀರ್ಣೋದ್ಧಾರಕ್ಕಾಗಿ, ದುರಸ್ತಿಗಾಗಿ ಮತ್ತು ಪುನರ್ ನಿರ್ಮಾಣಕ್ಕಾಗಿ ಮಾಡಿದ ಒಟ್ಟು ಖರ್ಚು ಏನು?

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬ್ಕಾರಿ ಸಚಿವರು) :

ಅ) 198.

ಜಿಲ್ಲಾವಾರು ವಿವರಗಳನ್ನು ಲಗತ್ತಿಸಿದ ಅನುಬಂಧಗಳಲ್ಲಿ ಕೊಡಲಾಗಿದೆ.

ಆ) 190.

ರಿಪೇರಿ ಪುನರ್ ನಿರ್ಮಾಣ ವಗೈರೆ ಸ್ಥಳಗಳ ವಿವರಗಳನ್ನು ಅನುಬಂಧದಲ್ಲಿ ತೊರಿಸಲಾಗಿದೆ. ಇನ್ನೂ ರಿಪೇರಿ ಮಾಡದವುಗಳ ಸಂಖ್ಯೆ - 8 ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಕೊಡಲಾಗಿದೆ.

ಇ) 20,45,369-00 ರೂಪಾಯಿಗಳು.